ಶ್ರೀ. ಪ್ರಭಕರ್ ಎಸ್. ರಾಣೆ
(ವಯಸ್ಕರ ಶಿಕ್ಷಣ ಸಚಿವರು)

ಹೌದು

ಕಳೆದ ೩ವರ್ಷಗಳಲ್ಲಿ ಜಮೆ ಮಾಡಿರುವ ಗ್ರಂಥಾಲಯ ಕರದ ವಿವರ ಹೀಗಿದೆ:

(ರೂ.ಗಳಲ್ಲಿ)

೧೯೮೯-೯೦ ೨,೧೯,೧೬,೪೨೧-೦೦

೧೯೯೦-೯೧ ೨,೩೨,೬೦,೪೦೨-೦೦

೧೯೯೧-೯೨ ೧,೧೫,೭೧,೬೫೭-೦೦

ಹೌದು. ಕೆಲವು ಮಂಡಲ ಪಂಚಾಯ್ತಿಯವರು ಗ್ರಂಥಾಲಯ ಕರವನ್ನು ಜಮೆ ಮಾಡಿರುವುದಿಲ್ಲ. ಅವುಗಳಿಗೆ ಜಮೆ ಮಾಡಲು ಸೂಕ್ತ ನಿರ್ದೇಶನ ನೀಡಲಾಗಿದೆ.

ಹೌದು. ಮಂಡಲ ಕೇಂದ್ರಗಳಲ್ಲಿ ಗ್ರಂಥಾಲಯ ತೆರೆಯುವ ಯೋಜನೆಯಡಿ ಇಲ್ಲಿಯವರೆಗೆ ೫೫೧ ಮಂಡಲ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಉಳಿದ ಮಂಡಲಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯ ತೆರೆಯಲಾಗುವುದು.

ಹೌದು. ಯೋಜನೆಯಡಿ ಒದಗಿಸುವ ಹಣದ ಅವಕಾಶವನ್ನು ಅಧರಿಸಿ ಹಂತ ಹಂತವಾಗಿ ಗ್ರಂಥಾಲಯ ತೆರೆಯಲಾಗುವುದು.

ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ೨೮೫ ಮಂಡಲ ಕೇಂದ್ರಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ.

ಮಂಡಲ ಕೇಂದ್ರಗಳನ್ನು ಹೊರತುಪಡಿಸಿ ಇತರ ಗ್ರಾಮಗಳಲ್ಲಿ ಗ್ರಂಥಾಲಯ ಪ್ರಾರಂಭಿಸುವ ಯೋಜನೆಯು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ:- ೧೯೯೨-೯೩ನೇ ಸಾಲಿನಲ್ಲಿ ತೆರೆಯಲಾದ ಆರ್.ಪಿ.ಡಿ. ದವಾಖಾನೆಗಳು.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೨:- (೪೨೮)
ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)
ಮಾನ್ಯ ಪಶುಸಂಗೋಪನಾ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೨-೯೩ ನೇ ಸಾಲಿನಲ್ಲಿ ರಾಜ್ಯದಲ್ಲಿ ಈಗಾಗಲೇ ಎಷ್ಟು ಆರ್.ಪಿ.ಡಿ. ದವಾಖಾನೆಗಳನ್ನೂ ಹಾಗೂ ಪಶುಚಿಕಿತ್ಸಾಲಯಗಳನ್ನು ತೆರೆಯಲಾಗಿದೆ?

ಆ) ಇದುವರೆವಿಗೆ ಆರ್.ಪಿ.ಡಿ. ದವಾಖಾನೆಗಳನ್ನು ತೆರೆಯದೇ ಇದ್ದಲ್ಲಿ ಈ ಸಾಲಿನಲ್ಲಿ ಎಷ್ಟು ಪಶುಚಿಕಿತ್ಸಾಲಯಗಳನ್ನು ತೆರೆಯಬೇಕೆಂದು ನಿರ್ಧರಿಸಲಾಗಿದೆ?

ಇ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದಲ್ಲಿ ಆರ್.ಪಿ.ಡಿ. ದವಾಖಾನೆ ತೆರೆಯಲಾಗುವುದೆಂದು ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿರುವ ಪ್ರಕಾರ ಆ ಗ್ರಾಮದಲ್ಲಿ ಆರ್.ಪಿ.ಡಿ.ದವಾಖಾನೆ ತೆರೆಯಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಈ) ಸವದತ್ತಿ ತಾಲ್ಲೂಕಿನ ಸುಲೆಗಟ್ಟಿ ಮತ್ತು ಮರಕುಂಟಿ ಗ್ರಾಮಗಳಲ್ಲಿ ಆರ್.ಪಿ.ಡಿ. ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ. ಕೆ.ಎಸ್. ನಾಗೇಗೌಡ
(ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಸಚಿವರು)

ಆರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ಮಂಜೂರುತಿ ನೀಡಲಾಗಿದೆ.

ಒಟ್ಟು ೨೦೦ ಹೊಸ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಹಾಗೂ

೧೦೦ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಉನ್ನತೀಕರಿಸಲು ಯೋಜಿಸಲಾಗಿದೆ.

ಅನಿಗೋಳ ಗ್ರಾಮಕ್ಕೆ ೧೯೯೦-೯೧ನೇ ಸಾಲಿನಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಕ್ಕೆ ಮಂಜೂರಾತಿ ನೀಡಲಾಗಿದೆ.

ಪ್ರಸ್ತಾವನೆ ಬಂದಲ್ಲಿ ಪರಿಗಣಿಸಲಾಗುವುದು.

ವಿಷಯ:- ರಾಜ್ಯದಲ್ಲಿರುವ ೧೦೦ ಹಾಸಿಗೆಗಳ ಆಸ್ಪತ್ರೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೩:- (೪೩೫)
ಶ್ರೀ ಡಿ.ಆರ್. ಪಾಟೀಲ್ (ಗದಗ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ೧೦೦ ಹಾಸಿಗೆಗಳ ಆಸ್ಪತ್ರೆಗಳನ್ನು ಜಿಲ್ಲಾ ಪರಿಷತ್ ಆಡಳಿತದಿಂದ ಹಿಂತೆಗೆದುಕೊಂಡು ಸರ್ಕಾರ ತಾನೇ ನಿರ್ವಹಿಸಲು ಪರಿಶೀಲಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ೧೧ಳ ಹಾಸಿಗೆಗಳ ಗದಗ ಜನರಲ್ ಆಸ್ಪತ್ರೆಯನ್ನು ಸರ್ಕಾರ ವಹಿಸಿಕೊಳ್ಳಲು ತೀವ್ರ ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಇಲ್ಲಾ ೧೦೦ಕ್ಕಿಂತ ಹೆಚ್ಚಿಗೆ ಹಾಸಿಗೆಗಳಿರುವ ಆಸ್ಪತ್ರೆಗಳನ್ನು ಸರ್ಕಾರವು ವಹಿಸಿಕೊಳ್ಳಲು ತೀರ್ಮಾನಿಸಿದೆ.

ಗದಗ ಆಸ್ಪತ್ರೆಯಲ್ಲಿ ೬೪ ಹಾಸಿಗೆಗಳಿರುತ್ತದೆ. ಸದರಿ ಆಸ್ಪತ್ರೆಯ ಹೆರಿಗೆ ವಿಭಾಗದಲ್ಲಿರುವ ೪೫ ಹಾಸಿಗೆಗಳನ್ನು ಒಟ್ಟುಗೂಡಿಸಿದಲ್ಲಿ ೧೦೯ ಹಾಸಿಗೆಗಳಾಗುತ್ತದೆ. ಈ ಆಸ್ಪತ್ರೆಯನ್ನು ಜಿಲ್ಲಾಪರಿಷತ್ ವ್ಯಾಪ್ತಿಯಿಂದ ಸರ್ಕಾರದ ವಶಕ್ಕೆ ತೆಗೆದು ಕೊಳ್ಳಲು ಪರಿಶೀಲಿಸಲಾಗುತ್ತಿದೆ.

ವಿಷಯ:- ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ ಅಭಿವೃದ್ಧಿ ಕಾರ್ಯಕ್ರಮಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೪:- (೫೧೨)
ಶ್ರೀವಾಟಾಳ್ ನಾಗರಾಜ್ (ಚಾಮರಾಜನಗರ)
ಮಾನ್ಯ ಪಶು ಸಂಗೋಪನೆ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಗಿ ಗ್ರಾಮದ ಹತ್ತಿರ ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ ಸ್ಥಾಪನೆಯಾಗಿ ಎಷ್ಟು ವರ್ಷಗಳಾಗಿವೆ?

ಆ) ಅದರಿಂದ ಆಗಿರುವ ಅಭಿವೃದ್ಧಿ ಕಾರ್ಯಕ್ರಮಗಳೇನು?

ಶ್ರೀ.ಕೆ.ಎಸ್. ನಾಗೇಗೌಡ
(ಪಶು ಸಂಗೋಪನಾ ರಾಜ್ಯಸಚಿವರು)

೭ ವರ್ಷಗಳಾಗಿರುತ್ತದೆ.

೧೯೮೬ ರಲ್ಲಿ ೨೭ ಮಿಶ್ರ ತಳಿ ಕಡಸು ಇದ್ದುವು. ಈಗ ಮಿಶ್ರತಳಿ ಕಡಸುಗಳಿವೆ. ಜಾಲ್ತಿ ಸಾಲಿಗೆ ೬೨,೦೦೦ ಲೀಟರ್ಸ್ ಹಾಲು ಉತ್ಪಾದನೆಯಾಗಿದೆ. ೪೧೨ ಟನ್ ಮೇವು ಉತ್ಪಾದನೆ ೩೫೯ ರೈತರಿಗೆ ಹೈನುಗಾರಿಕೆಯಲ್ಲಿ
೧೩೯ ಜನರಿಗೆ ಮೊಲ ಸಾಕಾಣಿಕೆಯಲ್ಲಿ
೩೬೦ ಜನರಿಗೆ ಕುರಿ ಸಾಕಾಣಿಕೆಯಲ್ಲಿ